**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಶ್ರೀ ಎಂ.ಬಿ.ಹರೀಶ್‌ಬಾಬು, ಕಾರ್ಯಪಾಲಕ ಇಂಜಿನಿಯರ್ ಮತ್ತು ಇತರರ ವಿರುದ್ಧ ಇಲಾಖಾ ವಿಚಾರಣೆ, ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸುವ ಬಗ್ಗೆ ಆದೇಶ.

ಓದಲಾಗಿದೆ

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 56 ಇಎನ್‌ಕ್ಯೂ 2016, ದಿನಾಂಕ:22.06.2016.

2. ವಿಚಾರಣಾ ವರದಿ ಸಂಖ್ಯೆ:ಉಪಲೋಕ್ -1/ಡಿಇ/224/2016/ಎ.ಆರ್.ಇ-14, ದಿನಾಂಕ:13.6.2019.

3. ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಸಂಖ್ಯೆ: ಉಪಲೋಕ್ -1/ಡಿಇ/224/2016/ಎ.ಆರ್.ಇ-14, ದಿನಾಂಕ:17.6.2019.

4. 2 ನೇ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 46 ಇಎನ್‌ಕ್ಯೂ 2019, ದಿನಾಂಕ:28.6.2019.

5. ಆರೋಪಿತರ ವಿವರಣೆ ದಿನಾಂಕ:
   1. ಶ್ರೀ ಎಂ.ಬಿ.ಹರೀಶ್‌ಬಾಬು, ಕಾ.ಇಂ ದಿ: 18.7.2019
   2. ಶ್ರೀ ಹೆಚ್.ಎಂ.ಲಿಂಗರಾಜು, ಸ.ಕಾ.ಇಂ ದಿ:18.7.2019
   3. ವಿ.ನಾಗರಾಜ್, ಕಿ.ಇಂ ದಿ:19.7.2019

**ಪ್ರಸ್ತಾವನೆ:-**

ಶ್ರೀ ವೆಂಕಟೇಶಪ್ಪ ಬಿನ್ ವೆಂಕಟರಾಮಪ್ಪ, ಗುಮ್ಮರೆಡ್ಡಿಪುರ ಅಂಚೆ ಇವರು ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ್ದ ದೂರಿನ ಕುರಿತು ಮಾನ್ಯ ಉಪಲೋಕಾಯುಕ್ತರು ತನಿಖೆ ಕೈಗೊಂಡು ದಿನಾಂಕ:09.6.2016 ರಂದು ಸರ್ಕಾರಕ್ಕೆ ಸಲ್ಲಿಸಿದ್ದ ಕಲಂ 12(3) ರ ವರದಿಯನ್ನು ಸರ್ಕಾರವು ಪರಿಶೀಲಿಸಿ, ಕೋಲಾರ ತಾಲ್ಲೂಕು ಐತರಾಸನಹಳ್ಳಿ ಮುಖ್ಯ ರಸ್ತೆಯಿಂದ ಚಿಲಪನಹಳ್ಳಿವರಗೆ ರಸ್ತೆ ಡಾಂಬರೀಕರಣ ಕಾಮಗಾರಿಗೆ ಬಳಸಲಾದ ಸಾಮಗ್ರಿಯಾದ ಡಾಂಬರ್ ಪರಿಮಾಣದಲ್ಲಿ ಗಣನೀಯ ವ್ಯತ್ಯಯಗಳು ಕಂಡು ಬಂದಿದ್ದು ಇದರಿಂದ ಸರ್ಕಾರಕ್ಕೆ ರೂ. 33,651/- ಗಳ ನಷ್ಟ ಉಂಟಾಗಿರುವ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅನುಷ್ಠಾನಕ್ಕೆ ಕಾರಣರಾದ ಈ ಕೆಳಕಂಡ ಮೂವರ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು ಅನುಸಾರ ನಡೆಸಲು ತೀರ್ಮಾನಿಸಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14ಎ ರ ಅನುಸಾರ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿರುತ್ತದೆ+:-

1. ಶ್ರೀ ಎಂ.ಬಿ.ಹರೀಶ್ ಬಾಬು, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ.
2. ಶ್ರೀ ಹೆಚ್.ಎಂ.ಲಿಂಗರಾಜು, ಸ.ಕಾ.ಇಂ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕೋಲಾರ.
3. ಶ್ರೀ ನಾಗರಾಜ್, ಕಿ.ಇಂ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕೋಲಾರ.

ಅದರನ್ವಯ ಲೋಕಾಯುಕ್ತ ಕಛೇರಿಯು ಇಲಾಖಾ ವಿಚಾರಣೆಯನ್ನು ನಡೆಸಿರುತ್ತದೆ. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರು ದಿನಾಂಕ: 17.6.2019 ರ ಪತ್ರದೊಂದಿಗೆ ಮೇಲೆ ಓದಲಾದ ಕ್ರಮಾಂಕ (2)

ರಲ್ಲಿನ ವಿಚಾರಣಾ ವರದಿ, ಕ್ರಮಾಂಕ (3) ರಲ್ಲಿನ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು, ವಿಚಾರಣೆಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಸರ್ಕಾರವು ವಿಚಾರಣಾ ವರದಿಯನ್ನು ಪರಿಶೀಲಿಸಿದ್ದು, ಮಾನ್ಯ ಉಪಲೋಕಾಯುಕ್ತರು ಈ ಪ್ರಕರಣದಲ್ಲಿ ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-1 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿದ್ದು ನಂತರ ವಿಚಾರಣಾಧಿಕಾರಿಗಳನ್ನು ಬದಲಿಸಿದ್ದು, ಅಂತಿಮವಾಗಿ ಅಪರ ನಿಬಂಧಕರು ವಿಚಾರಣೆಗಳು-14 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಶಿಸ್ತು ಪ್ರಾಧಿಕಾರದ ಪರ 2 ಸಾಕ್ಷಿಗಳು ಹಾಗೂ 13 ದಾಖಲೆಗಳನ್ನು ಹಾಗೂ ಆರೋಪಿತರ ಪರ ಒಂದು ಸಾಕ್ಷಿ ಹೇಳಿಕೆ, ಒಂದು ದಾಖಲೆಗಳನ್ನು ಪರಿಗಣಿಸಿ, ಮೂವರು ಆರೋಪಿತರ ವಿರುದ್ಧದ ಆರೋಪಗಳು ಸಾಬೀತಾಗುತ್ತವೆ ಎಂಬ ನಿರ್ಣಯಿಸಿ ಸದರಿ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಗೆ ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ: 13.6.2019 ರಂದು ಸಲ್ಲಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಗೆ ಸಹಮತಿ ವ್ಯಕ್ತಪಡಿಸಿ, ಆರೋಪಿತರ ವಿರುದ್ಧ ಸಾಬೀತಾದ ಆರೋಪಗಳ ಗಂಭೀರತೆಗೆ ಅನುಗುಣವಾಗಿ ದಂಡನೆ ವಿಧಿಸಲು ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ:17.6.2019 ರಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾ ವರದಿಯ ಕುರಿತು ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಎಲ್ಲಾ ಮೂವರು ಆಪಾದಿತರಿಗೆ ಮೇಲೆ ಓದಲಾದ ಕ್ರಮಾಂಕ (4) ರೊಂದಿಗೆ ವಿಚಾರಣಾ ವರದಿ, ಮಾನ್ಯ ಉಪ ಲೋಕಾಯುಕ್ತ ಶಿಫಾರಸ್ಸಿನೊಂದಿಗೆ 2 ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು. ಪ್ರತಿಯಾಗಿ ಮೂವರು ಅಧಿಕಾರಿ/ನೌಕರರು ಮೇಲೆ ಓದಲಾದ ಕ್ರಮಾಂಕ (5) ರಲ್ಲಿ ವಿವರಣೆ ಸಲ್ಲಿಸಿ, ಅವರ ವಿರುದ್ಧದ ಆರೋಪಗಳನ್ನು ನಿರಾಕರಿಸಿ, ಆರೋಪಗಳಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ, ಸಂಬಂಧಿಸಿದ ದಾಖಲೆಗಳು ಆರೋಪಿತರ ವಿವರಣೆಗಳನ್ನು ಪರಿಶೀಲಿಸಿರುತ್ತದೆ. ಮೂವರು ಅಧಿಕಾರಿ/ನೌಕರರಿಗೆ ಜಾರಿ ಮಾಡಲಾದ ಆರೋಪ ಪಟ್ಟಿಯಲ್ಲಿನ ಸಂಕ್ಷಿಪ್ತ ಆರೋಪವು ಈ ಕೆಳಕಂಡಂತಿದೆ:-

" They had executed road metalling work from 0.00 chainage to 0.40 mtrs, from Itharasanahally main road to Chillapanhally of Kolar Taluk and on inspection of the quality of the road work, it was found that the proportion of Tor used to lay the road, there was considerable deficiency and therefore there was economical loss of Rs. 33,651/- to the Government, DGO No.1 is individually responsible for the loss of Rs. 12,619/- to the Government at the rate of 37.5% and DGO-2 is individually responsible for the loss of Rs. 12,619/- to the Government at the rate of 37.5% and DGO-3 is individually responsible for the loss of Rs.8,413 /- to the Government at the of 25% as per KPWA Code vide para No.209 (b) and PWD (D) code Vol-2 para 301"

ಮೇಲ್ಕಂಡ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳು, ಶಿಸ್ತು ಪ್ರಾಧಿಕಾರದ ಪರ ಎರಡು ಸಾಕ್ಷಿಗಳು ಹಾಗೂ 13 ದಾಖಲೆಗಳನ್ನು ಪರಿಗಣಿಸಿರುತ್ತಾರೆ. ಆರೋಪಿ ಪರ ಒಂದು ಸಾಕ್ಷಿ ಹಾಗೂ ಒಂದು ದಾಖಲೆಗಳನ್ನು ಪರಿಗಣಿಸಿರುತ್ತಾರೆ. ದೂರುದಾರರಾದ ಶ್ರೀ ವೆಂಕಟೇಶಪ್ಪ, ಇವರನ್ನು ಶಿಸ್ತು ಪ್ರಾಧಿಕಾರದ ಮೊದಲನೇ ಸಾಕ್ಷಿಯಾಗಿ ಹೇಳಿಕೆ ಪಡೆದಿದ್ದು, ಸದರಿಯವರ ಹೇಳಿಕೆಯಲ್ಲಿ **"2014-15 ನೇ ಸಾಲಿನಲ್ಲಿ 13 ನೇ ಹಣಕಾಸು ಯೋಜನೆ ಅಡಿಯಲ್ಲಿ ಚಿಲ್ಲಪನಹಳ್ಳಿ ಇಂದ ಸಾಯಿಬಾಬ ದೇವಸ್ಥಾನದ ತನಕ ಜಿಪಂ, ಕೋಲಾರ ವತಿಯಿಂದ ಟಾರು ರಸ್ತೆ ಕಾಮಗಾರಿ ಮಾಡಿದ್ದರು. ಅಂದಾಜು ಮೊತ್ತ 5.00 ಲಕ್ಷ ಇತ್ತು. ರಸ್ತೆ ಮಾಡಿದ ಒಂದೂವರೆ ತಿಂಗಳ**

**ಅವಧಿಯಲ್ಲಿ ರಸ್ತೆಗೆ ಹಾಕಿದ ಟಾರು ಕಿತ್ತು ಬಂದಿತ್ತು, ಕಳಪೆ ಕಾಮಗಾರಿ ಮಾಡಿದ್ದರು. ಸದರಿ ಕಾಮಗಾರಿಯನ್ನು ಆಪಾದಿತ ನೌಕರರು ಮಾಡಿದ್ದರು"** ಎಂದು ಹೇಳಿಕೆ ನೀಡಿರುತ್ತಾರೆ. ಸದರಿಯವರು ಸಲ್ಲಿಸಿದ್ದ ದೂರು ಹಾಗೂ ಅದರೊಂದಗಿನ ನಮೂನೆಯನ್ನು ನಿಶಾನೆ-1 ಮತ್ತು 2 ಎಂದು ಹಾಗೂ ಸದರಿಯವರು ಸಲ್ಲಿಸಿದ್ದ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳ ಪ್ರತಿಗಳಿಗೆ ನಿಶಾನೆ- ಪಿ4 ಮತ್ತು ಕಾಮಗಾರಿಗೆ ಸಂಬಂಧಿಸಿದ ಛಾಯಾ ಚಿತ್ರಗಳನ್ನು ನಿಶಾನೆ ಪಿ-5 ಎಂದು ವಿಚಾರಣಾಧಿಕಾರಿಯವರು ಗುರುತಿಸಿಕೊಂಡಿರುತ್ತಾರೆ.

ಲೋಕಾಯುಕ್ತ ತಾಂತ್ರಿಕ ವಿಭಾಗದ ಸಹಾಯಕ ಇಂಜಿನಿಯರ್ ಆದ ಶ್ರೀಮತಿ ನಾಸಿರಾ ಇವರು ಕಾಮಗಾರಿಯನ್ನು ತಪಾಸಣೆ ನಡೆಸಿ ಸಲ್ಲಿಸಿದ್ದ ವರದಿಯನ್ನು ನಿಶಾನೆ-12 ಎಂದು ಗುರುತಿಸಿಕೊಳ್ಳಲಾಗಿದೆ. ತನಿಖಾ ಸಂದರ್ಭದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ನಿಶಾನೆ ಪಿ-6 ರಿಂದ 11 ರವರಗೆ ಗುರುತಿಸಿಕೊಳ್ಳಲಾಗಿದೆ. ಶ್ರೀಮತಿ ನಾಸಿರಾ ಇವರಿಂದ ಹೇಳಿಕೆ ಪಡೆದಿದ್ದು **"ಸದರಿಯವರು ಸಲ್ಲಿಸಿದ್ದ ವರದಿ ನಿಶಾನೆ – ಪಿ 12, ನಿಶಾನೆ 12 (ಬಿ), ನಿಶಾನೆ 12(ಸಿ) ನ್ನು ಉಲ್ಲೇಖಿಸಿ ಸದರಿ ಕಾಮಗಾರಿಯಿಂದ ಸರ್ಕಾರಕ್ಕೆ ರೂ. 33,651/- ನಷ್ಟ ಉಂಟಾಗಿರುತ್ತದೆಯೆಂದು, ಆಸೌನೌರವರುಗಳು ಈ ನಷ್ಟಕ್ಕೆ ಹೊಣೆಗಾರರೆಂದು ಈಗಾಗಲೇ ವರದಿಯಲ್ಲಿ ತಿಳಿಸಿರುತ್ತೇನೆಂದು"** ಹೇಳಿಕೆ ದಾಖಲಿಸಿರುತ್ತಾರೆ.

ವಿಚಾರಣಾಧಿಕಾರಿಗಳು ದೂರಾದಾರರಾದ ಶ್ರೀ ವೆಂಕಟೇಶಪ್ಪ ಇವರು ತಮ್ಮ ದೂರಿನೊಂದಿಗೆ ಸಲ್ಲಿಸಿದ್ದ ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ತಾಂತ್ರಿಕ ವಿಭಾಗವು ತನಿಖೆ ನಡೆಸಿ ಸಲ್ಲಿಸಿದ ತನಿಖಾ ವರದಿ ಹಾಗೂ ವಿಚಾರಣಾ ಸಂದರ್ಭದಲ್ಲಿನ ಹೇಳಿಕೆಗಳನ್ನು ಪರಿಗಣಿಸಿ, ಆರೋಪಿತರ ವಿರುದ್ಧದ ಆರೋಪಗಳು ಸಾಬೀತಾಗಿರುತ್ತವೆ ಎಂಬ ನಿರ್ಣಯಕ್ಕೆ ಬಂದಿರುತ್ತಾರೆ.

ಮೂವರು ಆರೋಪಿತ ಅಧಿಕಾರಿ/ನೌಕರರುಗಳು ವಿಚಾರಣಾ ವರದಿಗೆ ವಿವರವಾದ ವಿವರಣೆಯನ್ನು ಸಲ್ಲಿಸಿದ್ದು, ಸದರಿ ವಿವರಣೆಯಲ್ಲಿ ಕಾಮಗಾರಿಗೆ ಬಳಸಲಾದ ಡಾಂಬರ್ ಪರಿಮಾಣವು ಶೇ 5% ರಷ್ಟು ಹೆಚ್ಚಿಗಿರುವುದು ಕಂಡು ಬಂದಿರುತ್ತದೆಯೆಂದು, ಅವಶ್ಯವಿದ್ದಲ್ಲಿ ಸದರಿ ಕಾಮಗಾರಿಯನ್ನು 3 ನೇ ವ್ಯಕ್ತಿ ಸಂಸ್ಥೆಯಿಂದ ಪರಿಶೀಲಿಸಬಹುದೆಂದು, ಕಾಮಗಾರಿಯನ್ನು KPWA Code Para No. (D) Vol-II para 301 ರ ಅನುಸಾರ ನಿರ್ವಹಿಸಲಾಗಿದೆಯೆಂದು, ಸದರಿ ಕಾಮಗಾರಿಯನ್ನು ನಿರ್ವಹಿಸಿ 5 ವರ್ಷಗಳು ಕಳೆದರೂ ಇಂದಿಗೂ ಸುಸ್ಥಿತಿಯಲ್ಲಿರುತ್ತದೆಯೆಂದು, ದೂರುದಾರರಾದ ಶ್ರೀ ವೆಂಕಟೇಶಪ್ಪ ಇವರು ಸುಳ್ಳು ದೂರನ್ನು ಸಲ್ಲಿಸಿರುತ್ತಾರೆಂದು, ಕಾಮಗಾರಿಯು 2014-15 ಸಾಲಿಗೆ ಸಂಬಂಧಿಸಿದ್ದಾಗಿದ್ದು, ಸದರಿ ಕಾಮಗಾರಿಯನ್ನು ಎರಡು ವರ್ಷಗಳ ನಂತರ ತನಿಖೆ ನಡೆಸಿ ವರದಿ ಸಲ್ಲಿಸಲಾಗಿದೆಯೆಂದು, ಪ್ರಶ್ನಿತ ಕಾಮಗಾರಿಯನ್ನು ತಾವೇ ಸ್ವತಃ ಖುದ್ದು ಮೂರು ಸ್ಥಳದಲ್ಲಿ ಪರೀಕ್ಷಿಸಿದ್ದು, Asphalting/using bitumen ಪ್ರಮಾಣ 5.16 ಕಂಡು ಬಂದಿರುತ್ತದೆಯೆಂದು, ವಿಚಾರಣಾಧಿಕಾರಿಯವರ ನಿರ್ಣಯವನ್ನು ಒಪ್ಪಿ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಕ್ರಮವು ನ್ಯಾಯ ಸಮ್ಮತವಲ್ಲವೆಂದು ತಿಳಿಸಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಉತ್ತಾರಾಂಚಲ ರಾಜ್ಯ ವಿರುದ್ಧ ಖರಾಕ್ ಸಿಂಗ್ ಇವರ ಪ್ರಕರಣವನ್ನು ಉಲ್ಲೇಖಿಸಿರುತ್ತಾರೆ.

ಮುಂದುವರಿದು, ಸದರಿ ಕಾಮಗಾರಿಯು 400 ಮೀಟರ್ ಒಳಗೊಂಡಿದ್ದು, ಪ್ರಸ್ತುತವು ಸುಸ್ಥಿತಿಯಲ್ಲಿರುತ್ತದೆಯೆಂದು ತಿಳಿಸಿ, ರಸ್ತೆಯ ಛಾಯಾ ಚಿತ್ರಗಳನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ. ವಿಚಾರಣಾ ಕಾಲಕ್ಕೆ ವಿಚಾರಣಾಧಿಕಾರಿಗಳ ಮುಂದೆ ಆರೋಪಗಳ ಕುರಿತಂತೆ ಸಂಪೂರ್ಣ ವಾಸ್ತುವಾಂಶಗಳನ್ನು ಮಂಡಿಸಲಾಗಿರುತ್ತದೆಯೆಂದು, ಸದರಿ ಅಂಶಗಳನ್ನು ಪರಿಗಣಿಸಿರುವುದಿಲ್ಲವೆಂದು ತಿಳಿಸಿ ವಿವಿಧ ನ್ಯಾಯಾಲಯಗಳ ಆದೇಶಗಳನ್ನು ಉಲ್ಲೇಖಿಸಿ ತಮ್ಮ ವಿರುದ್ಧದ ಆರೋಪಗಳಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಪ್ರಸಕ್ತ ಪ್ರಕರಣದಲ್ಲಿ ವಿಚಾರಣಾಧಿಕಾರಿಗಳು ದೂರಿನೊಂದಿಗೆ ಲಗತ್ತಾದ ಕಾಮಗಾರಿಯ 8 ಛಾಯಚಿತ್ರಗಳನ್ನು ಪರಿಗಣಿಸಿದ್ದು, ಅವುಗಳನ್ನು ಪ್ರದರ್ಶಿತ ದಾಖಲೆ ನಿಶಾನೆ ಪಿ- 5 ಎಂದು ಗುರುತಿಸಿಕೊಳ್ಳಲಾಗಿದೆ. ಸದರಿ ಛಾಯಾ

ಚಿತ್ರಗಳನ್ನು ದಿನಾಂಕ:17.6.2015 ರ ಅವಧಿಯಲ್ಲಿ ತೆಗೆದಿರುವ ಸಾಧ್ಯತೆ ಇರುತ್ತದೆ. ಕಾಮಗಾರಿಯ ಛಾಯಾ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಲಾಗಿ, ಪ್ರಶ್ನಿತ ರಸ್ತೆಯು ಕಳಪೆಯಾಗಿರುವುದು, ಜಲ್ಲಿ ಕಲ್ಲುಗಳು ಮೇಲೆ ಎದ್ದಿರುವುದು ಕಂಡು ಬರುತ್ತದೆ. ಸದರಿ ಕಾಮಗಾರಿಯನ್ನು ಲೋಕಾಯುಕ್ತ ತಾಂತ್ರಿಕ ವಿಭಾಗದ ತನಿಖಾಧಿಕಾರಿಗಳು ದಿನಾಂಕ:09.9.2015 ರಂದು ಪರಿವೀಕ್ಷಣೆ ಮಾಡಿದ್ದು ಅ ಅವಧಿಯಲ್ಲಿ ತೆಗೆದ ಛಾಯಾ ಚಿತ್ರಗಳಲ್ಲಿ ರಸ್ತೆಯು ಕೆಲವೊಂದು ಭಾಗಗಳಲ್ಲಿ ಗುಣ ಮಟ್ಟದಿಂದ ಅನುಷ್ಠಾನವಾಗಿರುವುದು ಕಂಡು ಬಂದರೆ ಕೆಲವೊಂದು ಭಾಗಗಳಲ್ಲಿ ಕಡಿಮೆ ಟಾರ್ ಬಳಸಿರುವ ಕಾರಣ ಜಲ್ಲಿಕಲ್ಲುಗಳು ಮೇಲೆ ಎದ್ದಿರುವುದು ಕಂಡು ಬಂದಿರುತ್ತದೆ. ಇದರಿಂದಾಗಿ, ರಸ್ತೆಗೆ ನಿಗದಿತ ಪ್ರಮಾಣದಲ್ಲಿ ಡಾಂಬರು ಬಳಸಿರುವುದಿಲ್ಲವೆಂದು ತನಿಖಾದಿಕಾರಿಗಳು ನೀಡಿರುವ ವರದಿಯು ಸಮರ್ಥನೀಯವಾಗಿರುತ್ತದೆ.

ಆರೋಪಿತ ಅಧಿಕಾರಿ/ನೌಕರರು ತಮ್ಮ ವಿವರಣೆಯೊಂದಿಗೆ ಸಲ್ಲಿಸಿರುವ ಛಾಯಾ ಚಿತ್ರಗಳನ್ನು ದೂರುದಾರರು ತಮ್ಮ ದೂರಿನೊಂದಿಗೆ ಸಲ್ಲಿಸಿದ್ದ ಛಾಯಾ ಚಿತ್ರಗಳೊಂದಿಗೆ ತಾಳೆ ನೋಡಿದ್ದಲ್ಲಿ ಗಣನೀಯ ಪ್ರಮಾಣದ ವ್ಯತ್ಯಾಸಗಳು ಕಂಡು ಬರುತ್ತಿದ್ದು, ಎರಡು ಛಾಯಾ ಚಿತ್ರಗಳಲ್ಲಿ ಇರುವ ರಸ್ತೆಯು ಒಂದೇ ಆಗಿರುತ್ತದೆ. ಈ ಅಂಶಗಳನ್ನು ಗಮನಿಸಿದಲ್ಲಿ ದೂರು ಸಲ್ಲಿಕೆಯಾಗುವ ಕಾಲಕ್ಕೆ ಹಾಗೂ ತನಿಖಾ ಕಾಲಕ್ಕೆ ಪ್ರಶ್ನಿತ ಕಾಮಗಾರಿಯು ಕಳಪೆಮಟ್ಟದಿಂದ ಅನುಷ್ಠಾನಗೊಂಡಿರುವುದು ಅಲ್ಲದೆ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ನಮೂದಿಸಿರುವಂತೆ ರಸ್ತೆಯ ನಿರ್ಮಾಣದಲ್ಲಿ ಡಾಂಬರ್ ಬಳಕೆಯ ಪ್ರಮಾಣ ಕಡಿಮೆ ಇರುವುದು ಸ್ಪಷ್ಟವಾಗಿ ಕಂಡು ಬಂದಿದ್ದು, ಇದರಿಂದ ರೂ.33,651/-ಗಳ ಮೊತ್ತ ನಷ್ಟ ಉಂಟಾಗಿರುವ ಆರೋಪಿತರ ವಿರುದ್ಧದ ಆರೋಪವು ಸಾಭೀತಾಗಿರುತ್ತದೆ. ಇದರಿಂದಾಗಿ ಆರೋಪಿತರು ಸಲ್ಲಿಸಿರುವ ವಿವರಣೆಯು ವಿಚಾರಣಾಧಿಕಾರಿಯವರ ನಿರ್ಣಯವನ್ನು ಮಾರ್ಪಡಿಸುವ ಯಾವುದು ಅಂಶಗಳು ಕಂಡು ಬಂದಿರುವುದಿಲ್ಲ. ಆರೋಪಿತರು ನ್ಯಾಯಾಲಯದ ಕೆಲವೊಂದು ಆದೇಶಗಳನ್ನು ಉಲ್ಲೇಖಿಸಿದ್ದರು, ಅವುಗಳು ಈ ಪ್ರಕರಣಕ್ಕೆ ಯಥಾವತ್ತಾಗಿ ಅನ್ವಯವಾಗುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳ ನಿರ್ಣಯವನ್ನು ಒಪ್ಪಿ ಆರೋಪಿತರ ವಿರುದ್ಧ ಸಾಬೀತಾದ ಆರೋಪಗಳ ಗಂಭೀರತೆಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಗ್ರಾಅಪ 46 ಇಎನ್‌ಕ್ಯೂ 19, ಬೆಂಗಳೂರು, ದಿನಾಂಕ:16.01.2020**

ಪ್ರಸ್ತಾವನೆಯಲ್ಲಿ ವಿವರಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ/ ನೌಕರರ ವಿರುದ್ಧ ಸಾಭೀತಾದ ಆರೋಪಗಳ ಗಂಭೀರತೆಯನ್ನು ಪರಿಗಣಿಸಿ, ಅವರ ಹೆಸರಿನ ಮುಂದೆ ನಮೂದಿಸಿರುವಂತೆ ದಂಡನೆಯನ್ನು ವಿಧಿಸಿ ಆದೇಶಿಸಿದೆ.

| ಕ್ರ.ಸಂ. | ಅಧಿಕಾರಿಯ ಹೆಸರು | ವಿಧಿಸಲಾದ ದಂಡನೆ |
|---|---|---|
| 1 | ಶ್ರೀ ಎಂ.ಬಿ.ಹರೀಶ್ ಬಾಬು, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ. | ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 8(iv) ರನ್ವಯ ರೂ. 12,619/- ಗಳನ್ನು ಅವರ ವೇತನ ಭತ್ಯೆಗಳಿಂದ ವಸೂಲಿ ಮಾಡುವುದು ಹಾಗೂ ಸದರಿ ನಿಯಮಗಳ ನಿಯಮ 8(iii) ರನ್ವಯ ಕಾಲಿಕ ವೇತನ ಶ್ರೇಣಿಯಲ್ಲಿ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವುದು. |
| 2 | ಶ್ರೀ ಹೆಚ್.ಎಂ.ಲಿಂಗರಾಜು, ಹಿಂದಿನ ಸ.ಕಾ.ಇಂ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕೋಲಾರ. | ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 8(iv) ರನ್ವಯ ರೂ. 12,619/- ಗಳನ್ನು ಅವರ ವೇತನ ಭತ್ಯೆಗಳಿಂದ ವಸೂಲಿ ಮಾಡುವುದು ಹಾಗೂ ಸದರಿ ನಿಯಮಗಳ ನಿಯಮ 8(iv-a) ರನ್ವಯ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಎರಡು ಹಂತಗಳನ್ನು ಸಂಚಿತ ಪರಿಣಾಮ ಸಹಿತವಾಗಿ ಕೆಳಗಿಳಿಸುವುದು. |